# ● ಸುದ್ದಿ ಸಂಚಯ ●



**ಸ್ವಾಮಿ** ವಿವೇಕಾನಂದರ ಜಯಂತಿಯ ಅಂಗವಾಗಿ ದಿನಾಂಕ ೨೨.೦೧.೨೦೦೭ ರಂದು ಬೆಳಗಾವಿಯ ರಾಮಕೃಷ್ಣ ಮಿಷನ್ ಆಶ್ರಮವು ಗೋಕಾಕ್ ತಾಲೂಕಿನ ಚಿಕ್ಕನಂದಿ ಗ್ರಾಮದಲ್ಲಿ ೨೦೦ ಬಡ ಮಹಿಳೆಯರಿಗೆ ಸೀರೆಗಳನ್ನು ವಿತರಿಸಿತು.



**ಜನವರಿ** ೨೩ರಂದು ಬೆಳಗಾವಿಯ ಲಕ್ಷ್ಮೀನಗರದ ಸರ್ಕಾರಿ ಶಾಲೆಯ ವಿದ್ಯಾರ್ಥಿಗಳಿಗೆ ಊಟದ ತಟ್ಟೆ-ಲೋಟಗಳನ್ನು ಬೆಳಗಾವಿ ಆಶ್ರಮದ ವತಿಯಿಂದ ವಿತರಿಸಲಾಯಿತು.



**ಮೈಸೂರಿನ** ಶ್ರೀರಾಮಕೃಷ್ಣ ಆಶ್ರಮದ ಆಶ್ರಯದಲ್ಲಿ ನಡೆಸಲಾಗುತ್ತಿರುವ **ವಿವೇಕಶಿಕ್ಷಣ** ಎಂಬ ವಿಶೇಷ ನೆರವಿನ ಉಚಿತ ಶಿಕ್ಷಣ ಕಾರ್ಯಕ್ರಮದ ಆರನೆಯ ವಾರ್ಷಿಕೋತ್ಸವ ಸಮಾರಂಭವು ಜನವರಿ ೨೬ರಂದು ನಡೆಯಿತು. ಮುಖ್ಯ ಅತಿಥಿಗಳಾಗಿ ಸದ್ವಿದ್ಯಾ ವಿದ್ಯಾ ಸಂಸ್ಥೆಯ ಕಾರ್ಯದರ್ಶಿಗಳಾದ ಶ್ರೀ ಅರ್ಕನಾಥ್ ಅವರು ಆಗಮಿಸಿದ್ದರು. ಆಶ್ರಮದ ಅಧ್ಯಕ್ಷರಾದ ಸ್ವಾಮಿ ನಿತ್ಯಸ್ಥಾನಂದಜಿ ಅವರು ಅಧ್ಯಕ್ಷತೆ ವಹಿಸಿದ್ದರು.

## ಜ್ಞಾನವಾಹಿನಿ ವರದಿ

ದಿನಾಂಕ ೧೬.೧.೨೦೦೭ರಿಂದ ೨೮.೧.೨೦೦೭ರವರೆಗೆ **ಗುಲ್ಬರ್ಗಾ** ಜಿಲ್ಲೆಯಲ್ಲಿ ಜ್ಞಾನವಾಹಿನಿ ಕಾರ್ಯಕ್ರಮಗಳು ಯಶಸ್ವಿಯಾಗಿ ನಡೆದುವು. ೧೩ ಶಾಲಾ ಕಾಲೇಜುಗಳಲ್ಲಿ ನಡೆದ ವ್ಯಕ್ತಿತ್ವ ವಿಕಸನ ಕಾರ್ಯಕ್ರಮಗಳಲ್ಲಿ ೩,೭೭೩ ವಿದ್ಯಾರ್ಥಿಗಳು ಭಾಗವಹಿಸಿ ಪ್ರಯೋಜನವನ್ನು ಪಡೆದುಕೊಂಡಿದ್ದಾರೆ. ಸಂಜೆಯ ವೇಳೆ ನಡೆದ ಸತ್ಸಂಗ ಮತ್ತು ಚಲನಚಿತ್ರ ಪ್ರದರ್ಶನಗಳಲ್ಲಿ ೨,೪೮೦ಕ್ಕೂ ಹೆಚ್ಚು ಸಾರ್ವಜನಿಕರು ಭಾಗವಹಿಸಿದ್ದರು.



ದಿನಾಂಕ ೨೯.೧.೨೦೦೭ರಿಂದ ೩.೨.೨೦೦೭ರವರೆಗೆ **ಬೀದರ್** ಜಿಲ್ಲೆಯಲ್ಲಿ ಜ್ಞಾನವಾಹಿನಿ ಕಾರ್ಯಕ್ರಮಗಳು ಯಶಸ್ವಿಯಾಗಿ ನಡೆದುವು. ೬ ಶಾಲಾ ಕಾಲೇಜುಗಳಲ್ಲಿ ನಡೆದ ವ್ಯಕ್ತಿತ್ವ ವಿಕಸನ ಕಾರ್ಯಕ್ರಮಗಳಲ್ಲಿ ೩,೨೧೪ ವಿದ್ಯಾರ್ಥಿಗಳು ಭಾಗವಹಿಸಿ ಪ್ರಯೋಜನವನ್ನು ಪಡೆದುಕೊಂಡಿದ್ದಾರೆ. ಸಂಜೆಯ ವೇಳೆ ನಡೆದ ಸತ್ಸಂಗ ಮತ್ತು ಚಲನಚಿತ್ರ ಪ್ರದರ್ಶನಗಳಲ್ಲಿ ಒಂದು ಸಾವಿರಕ್ಕೂ ಹೆಚ್ಚು ಸಾರ್ವಜನಿಕರು ಭಾಗವಹಿಸಿದ್ದರು.

ಈ ಸಂದರ್ಭದಲ್ಲಿ ಸುಮಾರು ಮೂವತ್ತು ಸಾವಿರ ರೂಪಾಯಿ ಬೆಲೆಯ ಆಧ್ಯಾತ್ಮಿಕ ಪುಸ್ತಕಗಳು ಮಾರಾಟವಾದುವು. ●